# ಆಯ್ಯೋ ಮರೆವು

**ಮರೆವಿನ ರೋಗ ಸುಲಭವಾಗಿ ಪತ್ತೆ ಹಚ್ಚಲಾಗದು. ಕಾಯಿಲೆಯ ಲಕ್ಷಣಗಳು ರೋಗಿಗೆ ಬೇಗನೇ ಗೋಚರಿಸದಿರುವುದು ಇದಕ್ಕೆ ಕಾರಣ. ಇದೀಗ ವೈದ್ಯ ವಿಜ್ಞಾನಿಗಳು ಅಲ್ಜೈಮರ್ಸ್ ಕಾಯಿಲೆಯನ್ನು ಶೀಘ್ರವಾಗಿ ಪತ್ತೆ ಹಚ್ಚುವ ವಿಧಾನ ಕಂಡುಹಿಡಿದಿದ್ದು, ರೋಗಿಗಳಲ್ಲಿ ಬೇಗನೆ ಗುಣಮುಖರಾಗುವ ಆಶಾಭಾವನೆ ಮೂಡುವಂತಾಗಿದೆ.**

**ಡಾ.ಎಚ್.ಎಸ್. ಮೋಹನ್**



ಮರೆವು ರೋಗ ಅಥವಾ ಅಲ್ಜೈಮರ್ಸ್ ಮೆದುಳಿನ ಒಂದು ಕಾಯಿಲೆ. ಇದರಲ್ಲಿ ಕಾಯಿಲೆಗೆ ಒಳಗಾದ ವ್ಯಕ್ತಿಗೆ ತೀವ್ರ ರೀತಿಯ ಮರೆವು ಉಂಟಾಗುತ್ತದೆ. ನಿರ್ದಿಷ್ಟವಾದ ಚಿಕಿತ್ಸೆ ಈ ಕಾಯಿಲೆಗೆ ಸದ್ಯದಲ್ಲಿ ಲಭ್ಯವಿಲ್ಲ. ಆದರೆ ಈ ಕಾಯಿಲೆಯ ಮುಖ್ಯ ತೊಂದರೆ ಎಂದರೆ ಕಾಯಿಲೆಯ ಲಕ್ಷಣಗಳು ಬೇಗ ರೋಗಿಗೆ ಗೊತ್ತಾಗುವುದಿಲ್ಲ. ಲಕ್ಷಣವನ್ನು ಆಧರಿಸಿ ಕಾಯಿಲೆ ಇದೆ ಎಂದು ಗೊತ್ತಾಗುವ ಹೊತ್ತಿಗೆ ಕಾಯಿಲೆ ಬಹಳಷ್ಟು ಮುಂದುವರಿದಿರುತ್ತದೆ. ಹಾಗಾಗಿ ಈ ಕಾಯಿಲೆಯನ್ನು ಎಷ್ಟು ಬೇಗ ಕಂಡುಹಿಡಿಯಲಾಗುವುದೋ ಅಷ್ಟೂ ಒಳ್ಳೆಯದು. ವೈದ್ಯ ವಿಜ್ಞಾನಿಗಳು ಅಲ್ಜೈಮರ್ಸ್ ಕಾಯಿಲೆಯನ್ನು ಬೇಗ ಕಂಡು ಹಿಡಿಯಲು ಬಹಳಷ್ಟು ರೀತಿಯಿಂದ ಸಂಶೋಧನೆಗಳನ್ನು ಬಹಳ ಕಾಲದಿಂದ ನಡೆಸುತ್ತಿದ್ದಾರೆ. ಇತ್ತೀಚೆಗೆ ನಡೆಸಿದ ಒಂದು ಸಂಶೋಧನೆ ಬಹಳ ಆಶಾದಾಯಕವಾಗಿದೆ.

ಈ ಸಂಶೋಧನೆಯನ್ನು ವಿಜ್ಞಾನಿಗಳು ಇಲಿಗಳಲ್ಲಿ ನಡೆಸಿದ್ದಾರೆ. ಅವುಗಳ ಕಣ್ಣಿನ ಅಕ್ಷಿಪಟಲದಲ್ಲಿ **(Retina)** ಅದರ ರೂಪ **(Form)** ದಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಿ ಅಲ್ಜೈಮರ್ಸ್ ಕಾಯಿಲೆಯನ್ನು ಬಹಳ ಬೇಗ ಗುರುತಿಸಬಹುದು ಎಂಬುದು ವಿಜ್ಞಾನಿಗಳ ಅಭಿಮತ. ಈಗಾಗಲೇ ತಿಳಿಸಿರುವಂತೆ ಬೇಗ ಗುರುತಿಸುವುದರಿಂದ ಕಾಯಿಲೆ ತೀರಾ ಮುಂದಿನ ಹಂತಗಳಿಗೆ ಹೋಗುವ ಪ್ರಕ್ರಿಯೆಯನ್ನು ನಿಧಾನಿಸಬಹುದು.

ಜಗತ್ತಿನಾದ್ಯಂತ ಸುಮಾರು ಒಂದು ಕೋಟಿಗಿಂತಲೂ ಹೆಚ್ಚು ಜನರು ಈ ಕಾಯಿಲೆಗೆ ಒಳಗಾಗಿದ್ದಾರೆ. ಸುಮಾರು 2050 ರ ಹೊತ್ತಿಗೆ ಈ ಸಂಖ್ಯೆ 2.5 ಇಂದ 3 ಕೋಟಿಗಳಾಗಬಹುದೆಂದು ಒಂದು ಅಂದಾಜು. ಸಾಮಾನ್ಯವಾಗಿ 60 ವರ್ಷದ ನಂತರದ ವಯಸ್ಸಿನವರಲ್ಲಿ ಇದು ಬರುತ್ತದೆ. ಈಗೀಗ ಎಲ್ಲಾ ಕಡೆ ಮನುಷ್ಯರ ಜೀವಿತಾವಧಿ ಹೆಚ್ಚುತ್ತಿರುವುದರಿಂದ ಅಲ್ಜೈಮರ್ಸ್‌ಗೆ ಒಳಗಾಗುವವರ ಸಂಖ್ಯೆ ಹೀಗೆ ಜಾಸ್ತಿಯಾಗುತ್ತದೆ ಎನ್ನಲಾಗಿದೆ.

ಬೇಗ ಕಾಯಿಲೆ ಗುರುತಿಸುವುದು ಹಾಗೂ ಹಲವು ಮಾನಸಿಕ ವ್ಯಾಯಾಮಗಳಿಂದ ಕಾಯಿಲೆ ತೀವ್ರವಾಗುವುದನ್ನು ತಡೆಯಬಹುದು. ಆದರೆ ಆರಂಭದ ಹಂತದಲ್ಲಿ ಕಾಯಿಲೆ ಗುರುತಿಸುವುದೇ ಕಷ್ಟ. ಈ ಕಾಯಿಲೆಗೆ ನಿರ್ದಿಷ್ಟ ಜೈವಿಕ ಗುರುತುಗಳಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ರೋಗಿಯ ಮಾನಸಿಕ ಸ್ಥಿತಿ ತೀವ್ರವಾಗಿ ಇಳಿಮುಖವಾಗಿರುವುದು ಹಾಗೂ ಕೆಲವೊಮ್ಮೆ ಮೆದುಳಿನ ಸ್ಕ್ಯಾನ್‌ಗಳು ಇವುಗಳಿಂದ ಕಾಯಿಲೆಯನ್ನು ಈಗ ನಿರ್ದಿಷ್ಟವಾಗಿ ಪತ್ತೆ ಹಚ್ಚಲಾಗುತ್ತದೆ. ಈಗ ಅಮೆರಿಕದ ನ್ಯೂಯಾರ್ಕ್‌ನ ಡ್ಯೂಕ್ ವಿಶ್ವವಿದ್ಯಾನಿಲಯದ ಬಯೊ ಮೆಡಿಕಲ್ ಎಂಜಿನಿಯರು ಈಗಿರುವ ಎರಡು ತಾಂತ್ರಿಕತೆಯನ್ನು ಸೇರಿಸಿ ಹೊಸ ಮತ್ತೊಂದು ತಾಂತ್ರಿಕತೆಯನ್ನು ಶೋಧಿಸಿದ್ದಾರೆ. ಇದರ ಸಹಾಯದಿಂದ ಅವರು ಇಲಿಗಳ ಅಕ್ಷಿಪಟಲಗಳಲ್ಲಿ ಈ ಕಾಯಿಲೆಯ ಆರಂಭದ ಗುಣ ಲಕ್ಷಣಗಳನ್ನು ಭೇದಿಸಿದ್ದಾರೆ. ಹಾಗೆಯೇ ಇದನ್ನು ಮಾನವರಲ್ಲೂ